## 1

ಪಂಚ್ಲಿಂಗಪ್ಪನ ಮಾತುಗಳು ಕಿವಿಗೆ ಬಿದ್ದ ಲಾಗಾಯ್ತಿನಿಂದಲೂ ಸಂಪಕ್ಕಜ್ಜಿಯೊಳಗಿನ ದಿಗಿಲು ದಿನಕ್ಕೊಂದು ಯಾಸ ಹಾಕತೊಡಗಿತ್ತು. ಅದರ ಹೊಡೆತವನ್ನು ಹೆಂಗೋ ಹಂಗೆ ಒಂದಷ್ಟು ದಿನ ಸಂಬಾಳಿಸಿಕೊಂಡು ಬಂದಿದ್ದ ಸಂಪಕ್ಕಜ್ಜಿಗೆ ಆವತ್ತು ರಾತ್ರಿ ಬಿದ್ದ ಕನಸು ಅವಳನ್ನು ದಿಕ್ಕೆಡಿಸಿತ್ತು. ಹಂಗಾಗಿಯೇ ಮುಂಗೋಳಿಯ ಕೂಗಿಗೆ ಎದ್ದವಳೇ ಇದ್ದೊಂದು ಎಮ್ಮೆಯನ್ನೂ ಅದರ ನಾಕು ತಿಂಗಳ ಕರುವನ್ನೂ ತನ್ನ ಹೊಸ ಮನೆಯ ವಾರಾಸಿಗಿದ್ದ ಗುಡಿಸಲ ವಪ್ಪಾರಿನಿಂದ ಆಚೆಯ ಗೂಟಗಳಿಗೆ ಕಟ್ಟಿ ಕೊಟ್ಟಿಗೆಯನ್ನು ವಪ್ಪ ಮಾಡಿ, ತೋಟವನ್ನು ನೋಡುವ ನೆಪದಲ್ಲಿ ನಾಕೈದು ಸಾರ್ತಿ ತೋಟಕ್ಕೂ ಮನೆಗೂ ಹಾಸಿಕ್ಕಿದ್ದಳು. ಅಷ್ಟಾದರೂ ಮೂಡಲಲ್ಲಿ ಇನ್ನೂ ಅಚ್ಚಗಾಗದಿದ್ದ ಕಂಡು ಒಳಗೆ ನಡುಮನೆಯತ್ತ ಒಮ್ಮೆ ಕಣ್ಣಾಯಿಸಿ ಮುಂಬಾಗಿಲನ್ನು ಮುಂದಕ್ಕೆಳೆದುಕೊಂಡು ಮತ್ತೊಮ್ಮೆ ತೋಟದ ದಾರಿಯನ್ನು ಹಿಡಿಯಬೇಕು ಅಂದುಕೊಳ್ಳುತ್ತಿದ್ದವಳನ್ನು ಎದುರು ಮನೆಯ ಆಜಮಜ್ಜಿ, ‘ನಾನೂ ಆಟೊತ್ತಿಂದ ನೋಡ್ತಾನೇ ಇದೀನಿ ಅದೇನಾಗೈತಮ್ಮಿ ನಿಂಗಿವತ್ತ ಒಂದೇ ಸಮ್ಕೆ ತೊಟುತ್ತಾಕೂ ಮಂತಾಕುವೇ ತಿರುಗ್ತಿದೀಯಾ ಅದೂ ಕಣ್ಣುಯ್‌ದ್ರೆ ಕಣ್ಕಾಣುದ್ ಕತ್ಲೇಲಿ’ ಅಂದಳು. ಇದ್ದಕ್ಕಿದ್ದಂತೆ ಎದ್ದು ಬಂದ ಆಜಮ್ಮಜ್ಜಿಯ ಮಾತುಗಳಿಗೆ ಆ ಚಣಕ್ಕೆ ಏನು ಹೇಳಬೇಕು ಅಂತ ಅರಿಯದಾದ ಸಂಪಕ್ಕಜ್ಜಿ, ‘ಯಾಕೋ ಕಣಮ್ಮಿ ಕಣ್ಮುಚ್ಚಿದ್ರೆ ಸಾಕು, ಎಂತೆಂಥವೋ ಹಾಳಾದ ಸಪ್ನುಗುಳು,’ ಅಂತ ಒಳಗಿನ ದಿಗಿಲಿನ ಗುಟ್ಟು ಬಿಟ್ಟುಕೊಡದೆ ಹಂಗೇ ತಿಪ್ಪೆ ಸಾರಿಸಲು ನೋಡಿದಳು. ಆಜಮ್ಮಜ್ಜಿ, ‘ನೀನೆಲ್ಲಿ ಹೇಳ್ತಿಯಾ ತಗಾ,’ ಅಂತ ವಸಿ ಮುನಿಸು ಮಾಡಿಕೊಂಡಿದ್ದರಿಂದ ದಾರಿಗಾಣದಾದ ಸಂಪಕ್ಕಜ್ಜಿ ಕಷ್ಟ ಸುಖದಾಗೆ ಬಂದು ಆತ್ಕಣೋ ಇವ್ಳಿಗೇ ಗುಟ್ಟು ಮಾಡೋದು ಯಾಕೋ ಕೆಡುಕು ಅನಿಸಿ, ‘ನಿಂತಾವ ಹೇಳ್ದಿರೋ ಅಂತಾದ್ದು ಏನಿದ್ದಾತು,’ ಅಂತ ಆಜಮ್ಮಜ್ಜಿಯ ಮನೆಯ ಜಗಲಿಗೆ ಹೋಗಿ ಕೂತು ಹಿಂಗಿಂಗೆ ಈ ಈ ಥರ್ಕೆ ಅಂತ ಆವತ್ತು ಪಂಚ್ಲಿಂಗಪ್ಪ ಹೇಳಿದ್ದ ಮಾತುಗಳನ್ನೆಲ್ಲಾ ಹೇಳಿ ಮಂಕು ಬಡಿದವಳಂತೆ ಕೂತುಬಿಟ್ಟಳು. ಸಂಪಕ್ಕಜ್ಜಿಯ ಮಾತುಗಳು ಅವುಗಳೊಳಗಿನ ಆತಂಕ ಆಜಮ್ಮಜ್ಜಿಗೆ ಪೂರಾ ಅರಿವಾಗದಿದ್ದರೂ, ‘ಅಯ್ಯೋ ಅದೇನ್ ಒತ್ತುತಾ ಐತಂತಾ ಅವ್ಕೆ, ಎಲ್ಲಾ ಕಾಲಾಗ್ ನಡುದ್ರೆ ಈ ದರ್ವೇಸಿಗಳು ತಲೇಲೇ ನಡಿತಾವೆ, ಅಲ್ಲಾ ದಂಡ್ಗೆ ಎದುರ್ಲಿಲ್ಲ ದಳ್ಕೆ ಎದುರ್ಲಿಲ್ಲ ವೋಗೀ ವೋಗಿ ಈ ಅಡ್ನಾಡಿಗುಳ್ ಮಾತ್ಗೆಲ್ಲಾ ಈನಾಡಿ ತಲೆಕೆಡುಸ್ಕಂಡು ಕೂತ್ಕಂಡ್ರೆ ಆದಾತಾ ವೋಗೋಗು ಅದೇನ್ ಕೆಲ್ಸ ನೋಡ್ಕ್ಯ’ ಅಂತ ಸಣ್ಣಗೆ ನಿಡುಸುಯ್ದಳು.

ಕೆಲದಿನಗಳ ಹಿಂದೆ ತನ್ನ ಗಂಡ ಪಲಾರ್ದಯ್ಯನ ಖಾಸಾ ದೋಸ್ತಿ ಪಂಚ್ಲಿಂಗಪ್ಪನ ಮಾತುಗಳು ಹುಟ್ಟಾಕಿದ್ದ ದಿಗಿಲು ರವೋಟು ಇಳಿದಂತಾದರೂ ಮಗ ಬಾಲ್ರಾಜನನ್ನು ಕೋಡ್ಗಲ್ಲಿಗೆ ಕಟ್ಟಿ ಮನಸೋಯಿಚ್ಚೆ ಹೊಡೆಯುತ್ತಿದ್ದ ಕನಸಿನ ಹೊಡೆತದ ಬಿರುವು ಒಂಚೂರೂ ಕಮ್ಮಿಯಾಗದೆ, ‘ಅದೇನ್ ಕೇಡು ಕಾದ್ಯೆತೋ ಭಗವಂತಾ,’ ಅಂತ ತನಗೆ ತಾನೇ ಅಂದುಕೊಂಡು ಮನೆಯತ್ತ ಹೋದ ಸಂಪಕ್ಕಜ್ಜಿಗೆ ಹಾಲಾದ್ರೂ ಕರ್ಕಂಡ್ ಬಿಡುವಾ ಅಂತನಿಸಿ ಕರುವನ್ನು ಕುಡಿಯಲು ಬಿಟ್ಟು ತಾಲಿಯೊಂದನ್ನು ತರುವ ಸಲುವಾಗಿ ಮನೆಯೊಳಕ್ಕೆ ಹೋದಳು. ಹಂಗೆ ನೋಡಿದ್ರೆ ಸಂಪಕ್ಕಜ್ಜಿ ಯಾವತ್ತೂ ಹೊತ್ತುಟ್ಟೋಕೂ ಮುಂಚೆ ಹಾಲು ಕರಕಂಡಿದ್ದೇ ಇಲ್ಲ. ಈಟೊತ್ತಿಗೇ ಎಮ್ಮೆ ಹಾಲು ಇಳಿಸುತ್ತೋ ಇಲ್ಲವೋ ಕಾಣೆನಲ್ಲಾ ಅನ್ನುವ ಅನುಮಾನದೊಂದಿಗೇ ತಾಲಿ ತಂದವಳಿಗೆ ಅಚ್ಚರಿ ಅನ್ನುವಂತೆ ಎಮ್ಮೆ ಕೆಚ್ಚಲು ತುಂಬಾ ಹಾಲಿಳಿಸಿಕೊಂಡು ನಿಂತಿತ್ತು. ಕರುವುವಿನ ಬಾಯಿಗೆ ಕೈಯಿಕ್ಕಿ ಕೆಚ್ಚಲನ್ನು ಕಚ್ಚದಂತೆ ಮೆಲ್ಲಗೆ ಅದರ ಕಟಬಾಯನ್ನು ಬಿಡಿಸಿ ಗೂಟಕ್ಕೆ ನೇತಾಕಿ ಹಾಲು ಕರೆಯಲು